# ಪ್ರಕೃತಿ ಸುಂದರ, ಅಷ್ಟೇ ಕ್ರೂರ!

ಕುವೆಂಪು ಅವರು ತಮ್ಮ ಪ್ರಕೃತಿ ಗೀತೆಗಳಲ್ಲಿ ಸೌಂದರ್ಯಾನುಭೂತಿಯನ್ನು ಗ್ರಹಿಸಿ, ಅನುಭವಿಸಿ, ಅದರಲ್ಲಿಯೇ ಒಂದಾಗಿ ಅದೇ ಆಗಿ ಮೂಡಿಬಿಡುತ್ತಾರೆ. ಆ ರಸ ಪರವಶತೆ ನಮಗೆ ಅತೀತ ಅನುಭವವೆನ್ನಿಸಿದರೂ ಅದು ಅವರ ಅನುಭವ ಗ್ರಹಿಕೆಯಲ್ಲಿ ಅತ್ಯಂತ ಹೃದಯಗಮ್ಯ ಸತ್ಯ ಅಷ್ಟೇ ಅಲ್ಲ, ವಾಸ್ತವ ಸತ್ಯವೂ ಆಗಿಬಿಡುತ್ತದೆ. ಹೀಗಾಗಿ ಅವರ ಪ್ರಕೃತಿ ಗೀತೆಗಳಲ್ಲಿ ಉಚ್ಚ– ನೀಚ, ಮೇಲು– ಕೀಳು, ದೈತ್ಯ– ಕ್ರಿಮಿ ಎಂಬ ಅಂತರ ಮೂಡುವುದಿಲ್ಲ. ಅವರು ಎಲ್ಲದರಲ್ಲೂ ಬೆರಗನ್ನೂ ವಿಶೇಷ ಸತ್ವವನ್ನೂ ಸೌಂದರ್ಯವನ್ನೂ ಕಂಡುಬಿಡುತ್ತಾರೆ. ಅವರು ಚಿತ್ರಿಸುವ ಹುಲ್ಲು ಹೂವು ಮರಗಿಡ ಪ್ರಾಣಿ ಪಕ್ಷಿಗಳ ವೈವಿಧ್ಯ ಸಾಗರದಲ್ಲಿ ಸೌಂದರ್ಯದ ಕಂಪು ಹೊರ ಹೊಮ್ಮುತ್ತದೆ; ಆ ಕಂಪನ್ನು ಸಹೃದಯನು ಅನುಭವಿಸಿ ಆನಂದಿಸಬೇಕೆಂಬ ಬಯಕೆ ತೀವ್ರವಾಗಿರುತ್ತದೆ.

ಪ್ರಕೃತಿ ಕವನಗಳಲ್ಲಿ ಕಾಣುವ ಕವಿ ಕುವೆಂಪು, ಅತ್ಯಂತ ಭಿನ್ನವಾಗಿ ಅವರ ಗದ್ಯಕೃತಿಗಳಲ್ಲಿ ಕಾಣುತ್ತಾರೆ. ಅಲ್ಲಿ ಪ್ರಕೃತಿಯ ಇನ್ನೊಂದು ಅಸೌಂದರ್ಯ ಮುಖವನ್ನು ಅವರು ಅನಾವರಣ ಮಾಡುತ್ತಾರೆ. ಮೇಲ್ನೋಟಕ್ಕೆ ಕಾಣುವುದೇ ಸತ್ಯವಲ್ಲ, ಸುಂದರವಲ್ಲ; ಪ್ರಕೃತಿಗೆ ಭೀಕರವಾದ, ನಿಷ್ಕರುಣವಾದ, ಹೊರ ಸೌಂದರ್ಯಕ್ಕೆ ವಿರುದ್ಧವಾದ ಅಸಹ್ಯವೂ ಕೊಳಕೂ ದುರ್ವಾಸನೆಯುಕ್ತವೂ ಆದ ಮುಖವಿದೆ. ಅದು ಮನುಷ್ಯ ಜೀವಿಗಳನ್ನು– ಪ್ರಾಣಿ ಸಮುಚ್ಚಯವನ್ನು ಆವರಿಸಿ ಕಿತ್ತು ತಿಂದು ಹಿಂಸಿಸುತ್ತದೆ. ಅದು ಬದುಕಿನ ಕಠೋರ ವಾಸ್ತವ ಮುಖದ ಇರುವಿಕೆಯ ಅನುಭವವನ್ನು ಭೀತಕಣ್ಣುಗಳಿಂದ ಕಂಡು, ಅದನ್ನು ಜೀರ್ಣಿಸಿಕೊಂಡು ಸವಾಲುಗಳನ್ನು ಸ್ವೀಕರಿಸಲು ಸಿದ್ಧನಾಗುವಂತೆ ಜೀವಿಯನ್ನು ಉದ್ದೀಪಿಸುತ್ತದೆ. ಇದು ಜೀವವನ್ನು ಇಂಚು ಇಂಚಾಗಿ ಗಟ್ಟಿಗೊಳಿಸುವ ಕ್ರಿಯೆ. ಕುವೆಂಪು ಅವರ ಈ ಪ್ರಕೃತಿ ಚಿತ್ರಣ ಜೀವ ಜಗತ್ತಿನ ಗೂಢ ಸಂಕೀರ್ಣ ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳನ್ನು ತಿಳಿವಳಿಕೆಗೆ ತಂದುಕೊಡುವ ಸೃಷ್ಟ್ಯಾತ್ಮಕ ಪ್ರತಿಭೆ!

ಕುವೆಂಪು ಅವರ ಈ ಎರಡೂ ಬಗೆಯ ಪ್ರಕೃತಿ ಚಿತ್ರಣವೂ ಒಂದೇ ಸತ್ಯದ ಎರಡು ವಾಸ್ತವ ಮುಖವೇ ಆಗಿದೆ. ಆದರೆ ಇವುಗಳಲ್ಲಿ ಯಾವುದು ಕಟು ವಾಸ್ತವ? ಯಾವುದು ಲಘು ವಾಸ್ತವ? ಪ್ರಕೃತಿಯ ಪಕ್ಷಿನೋಟದ ರಮಣೀಯತೆಯು ಆನಂದ ತಂದುಕೊಡುತ್ತದೆ, ನಿಜ. ಆದರೆ ಅವರ ಆಳದ ಬುಡದಲ್ಲಿ, ಅಂತರಂಗದಲ್ಲಿ ನಿತ್ಯನಿಮಿಷವೂ ನಡೆಯುತ್ತಿರುವ ಘನ ಘೋರ ಸಾವಯವ ರಾಸಾಯನಿಕ ಕ್ರಿಯೆಯು ಉತ್ಪತ್ತಿ ಮಾಡುವ ಶಕ್ತಿ ವಿಶೇಷವು ಆನಂದದ ಅನುಭೂತಿಯನ್ನುಂಟು ಮಾಡುವ ಬದಲು ಜೀವಿಗೆ ಯಾತನೆಯನ್ನು ಮೂಡಿಸುತ್ತದೆ.

ಅದರ ಈ ಘನಘೋರ ಕ್ರಿಯಾತ್ಮಕ ಚಟುವಟಿಕೆಯ ಆಶಯವಾದರೂ ಏನು? ಮೇಲಿನ ಸೌಂದರ್ಯ ಸೃಷ್ಟಿಯೇ ಅಲ್ಲವೆ? ಆ ಸೃಷ್ಟಿಯಲ್ಲಿ ತಾನು ಬದುಕಲು ಮತ್ತು ತನ್ನ ಸಂತತಿ ಮುಂದುವರಿಯಲು ಶ್ರಮವಲ್ಲದೆ ಮತ್ತೇನಿದೆ? ತನ್ನ ಹೊರ ಮೈನ ಸೌಂದರ್ಯ ರಾಶಿ ಲಘುವಾದರೂ ಮತ್ತೆ ಮತ್ತೆ ಋತು ಋತುಮಾನಗಳಲ್ಲಿ ವೈವಿಧ್ಯಮಯಗೊಳಿಸುವ ಉದ್ದೇಶವಾದರೂ ಅದೇ ತಾನೇ? ಅಂತರಂಗವೇ ನಿಧಾನ, ಸತ್ಯ! ಮೇಲ್ಮೈ ಕ್ಷಣಿಕ, ಸುಂದರ ಸತ್ಯ! ಸೃಷ್ಟಿಗೆ ಎರಡೂ ಅನಿವಾರ್ಯ. ಕೋಮಲತೆ– ಕಠೋರತೆ ಒಮ್ಮುಖವಾಗಿ ಸಾಗಿದಾಗ ಮಾತ್ರ ಬದುಕಿನಲ್ಲಿ ಸತ್ಯದ ಮಂಥನ ಸಾಧ್ಯ. ಕೋಮಲತೆ ಕಠೋರತೆಯ ಸ್ಪರ್ಶದಿಂದ ಬದುಕನ್ನು ಎದುರಿಸುವ ಶಕ್ತಿಯನ್ನು ಪಡೆದರೆ, ಕಠೋರತೆ ಕೋಮಲತೆಯ ಸಂಸರ್ಗದಿಂದ ಹೃದಯವಂತವಾಗುತ್ತದೆ. ಕುವೆಂಪು ಈ ಎರಡೂ ಸತ್ಯಗಳನ್ನು ತಮ್ಮ ಪದ್ಯ ಗದ್ಯಗಳಲ್ಲಿ ಅನಾವರಣ ಮಾಡಿ ಸೌಂದರ್ಯ– ಭೀಕರತೆಗಳೆರಡೂ ಸೃಷ್ಟಿಯ ಚಲನಶೀಲತೆಯ ಎರಡು ಅನಿವಾರ್ಯ ಅಗತ್ಯಗಳೆಂದು ಬಿಂಬಿಸುತ್ತಾರೆ.

ಸದಾ ಚಲನ ಶೀಲವಾದ, ಸ್ಥಿತ್ಯಂತರವನ್ನು ಬಯಸುವ, ರೂಪಾಂತರ ಬಯಸುವ ಪ್ರಕೃತಿಯ ಬಯಲಗಣ್ಣಿಗೆ ಅದರ ಹೊರಮೈ ಮಾತ್ರ ಗೋಚರಿಸುತ್ತದೆ. ಪಕ್ಷಿನೋಟಕ್ಕೆ ಭಯಂಕರ ಸುಡು ಸುಡುವ ಮರಳುಗಾಡುಗಳು, ಆಳಪಾತಾಳ ಕಣಿವೆಗಳೂ ಸುಂದರವಾಗಿ ಕಾಣುತ್ತವೆ. ಸಾಗರ ಹೊರ ಮೈನ ವೈವಿಧ್ಯಮಯ ಬಣ್ಣ ವಿಸ್ತಾರ ಲಲಿತ ಅಲೆಗಳ ಆಳ ಅಂತಂಗದಲ್ಲಿರುವ ಭಯ ಮೂಡಿಸುವ ಅಗ್ನಿಕುಂಡಗಳು ಕುದಿಯುತ್ತಿರುತ್ತವೆ. ಪ್ರಕೃತಿಗೆ ತನ್ನ ಸಮತೋಲನವನ್ನು ತೂಗಿಸಿಕೊಳ್ಳುವ ಸಹಜ ಗುಣವಿರುತ್ತದೆ. ಆದುದರಿಂದಲೇ ಅದು ಕೆಲವೊಮ್ಮೆ, ಕೆಲವು ಕಡೆಗಳಲ್ಲಿ ನಗುತ್ತಿರುವಂತೆ ಭಾಸವಾದರೆ, ಮತ್ತೆ ಅದೇ ವೇಳೆಯಲ್ಲಿ ಹಲವು ಕಡೆ ಅಳುತ್ತಿರುವಂತೆ ಅಥವಾ ತನ್ನ ಆವರಣವನ್ನೇ ಅಳಿಸುತ್ತಿರುತ್ತದೆ. ಭೂಮಿಯನ್ನು ನಡುಗಿಸಿ ಪಾತಾಳ ಸೃಷ್ಟಿ ಮಾಡಿ, ಬೆಂಕಿ ಉಗುಳಿ ವಿನಾಶ ಮಾಡಿ, ಆಕಾಶ ತೂತು ಮಾಡಿ ಮಸಲಧಾರೆ ಕರೆದು ಅತಿರೇಕವನ್ನು ಮಿತಗೊಳಿಸುವ ಕೆಲಸ ಮಾಡುತ್ತದೆ.

ಪ್ರಕೃತಿಯ ಅಂಶವಾದ ನಾವು ಈ ಸತ್ಯವನ್ನು ಅರ್ಥ ಮಾಡಿಕೊಂಡರೆ, ಅದರ ಸೌಂದರ್ಯ ಮತ್ತು ಕ್ರೂರತೆಗಳು ಪ್ರಾಕೃತಿಕ ನ್ಯಾಯದ ಮುಖಗಳಂತೆ ಗೋಚರಿಸಿ ಹೃದಯಕ್ಕೆ ಶಾಂತತೆ ಮೂಡುತ್ತದೆ.

■ **ಶಿಕಾಕು**

## ಮಾತೇ ಮುತ್ತು

★ ಸಾವನ್ನಾಗಲೀ, ಬದುಕನ್ನಾಗಲೀ ಅಭಿನಂದಿಸಬಾರದು. ಹೇಗೆ ಸೇವಕನು ಆಜ್ಞೆಯನ್ನು ಪಾಲಿಸುತ್ತಾನೋ ಹಾಗೆ ಕಾಲವನ್ನೇ ಎದುರು ನೋಡುತ್ತಿರಬೇಕು.

–ಮಹಾಭಾರತ

★ ಕೆಸರಿಲ್ಲದ ಸರೋವರ, ಖಳರಿಲ್ಲದ ಸಭೆ, ಒರಟಾದ ಅಕ್ಷರಗಳಿಲ್ಲದ ಕಾವ್ಯ ಶೋಭಿಸುತ್ತವೆ. ವಿಷಯ ವಾಸನೆಗಳಿಲ್ಲದಿದ್ದಲ್ಲಿ ಮನಸ್ಸು ಶೋಭಿಸುತ್ತದೆ.

–ರಸಗಂಗಾಧರ

★ ಸರ್ಪವು ಜೀರ್ಣವಾದ ಪೊರೆಯನ್ನು ಬಿಸುಡುವಂತೆ, ಯಾವನು ಕೋಪವನ್ನು ದೂರ ಮಾಡಿಕೊಂಡು ತಾಳ್ಮೆಯಿಂದಿರುವನೋ ಅವನೇ ಮನುಷ್ಯ.

–ರಾಮಾಯಣ

★ ನಾವು ಸದಾ ತೆರೆದಿರುವ ಬಾಗಿಲಿನ ಮೂಲಕವೇ ದೌರ್ಭಾಗ್ಯ ಪ್ರವೇಶಿಸುತ್ತದೆ.

–ಜೆಕ್ ಗಾದೆ

★ ಸಂಪತ್ತು ಒಂದು ಶಿಕ್ಷಣ, ವಿಪತ್ತು ಅದಕ್ಕಿಂತಲೂ ದೊಡ್ಡ ಶಿಕ್ಷಣ. ಪ್ರಾಪ್ತಿ ಮನಸ್ಸನ್ನು ಮೃದುವಾಗಿ ತಟ್ಟುತ್ತದೆ, ಅಪ್ರಾಪ್ತಿ ಅವನಿಗೆ ತಾಲೀಮು ನೀಡಿ ದೃಢಗೊಳಿಸುತ್ತದೆ.

–ಮಾಂಟೆಸೋರಿ

★ ಉಪದೇಶ ಎಷ್ಟು ಸುಂದರವಾಗಿದೆ ಎಂದು ಪರೀಕ್ಷಿಸುವುದಕ್ಕಿಂತ ಅದನ್ನು ಎಷ್ಟರಮಟ್ಟಿಗೆ ಆಚರಣೆಗೆ ತರುತ್ತೇವೆ ಎನ್ನುವುದು ಮುಖ್ಯ.

–ಸಂತ ಫ್ರಾನ್ಸಿಸ್

★ ಯಾವುದೇ ಕಾರಣವಿಲ್ಲದೆ ನಿಮ್ಮನ್ನು ಬೇರೆಯವರು ಪ್ರೀತಿಸಿದರೆ ಹಾಗೂ ಸಕಾರಣಕ್ಕೆ ಪ್ರಶಂಸೆ ಮಾಡಿದರೆ ಸಂತೋಷ ಉಂಟಾಗುತ್ತದೆ.

–ರಾಬರ್ಟ್ ಬ್ರಾಲ್ಟ್

★ ನಡೆನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಯಲ್ಲ. ಆಚಾರವೇ ಕುಲ, ಅನಾಚಾರವೇ ಹೊಲೆ.

–ಮಾದಾರ ಚೆನ್ನಯ್ಯ

★ ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗೆ ಉಂಟೆ ಅಯ್ಯ? ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗೆ ಉಂಟೆ ಅಯ್ಯ?

–ಆಯ್ದಕ್ಕಿ ಲಕ್ಕಮ್ಮ

★ ವಿಜಯದ ಹತ್ತಿರ ಬಂದಾಗ ಹೇಡಿಗಳೂ ವೀರರಾಗುತ್ತಾರೆ. ಬಳಲಿ ಬೆಂಡಾದ ಪಯಣಿಗ ಮನೆಯ ಬಳಿ ಬಂದ ಕೂಡಲೇ ಕಾಲಿಗೆ ರೆಕ್ಕೆ ಬಂದಂತೆ ಭ್ರಮಿಸುತ್ತಾನೆ ಅಲ್ಲವೇ?

–ಪ್ರೇಮಚಂದ್

★ ಕಣ್ಣೀರು ಸುರಿಸುವವನು ಸತ್ತಂತೆ.

–ತಿರುವಳ್ಳುವರ್

★ ಪರಿಪೂರ್ಣ ಪ್ರೀತಿಯನ್ನು ಸೃಷ್ಟಿಸುವ ಬದಲಿಗೆ, ನಾವು ಪರಿಪೂರ್ಣವಾಗಿ ಪ್ರೀತಿಸುವವರ ಹುಡುಕಾಟದಲ್ಲಿ ಕಾಲಹರಣ ಮಾಡುತ್ತೇವೆ.

–ಟಾಮ್ ರಾಬಿನ್ಸ್